ಶ್ರೀ ಎ. ಬಿ. ಬೆಡಗೆ.—ಈಗಾಗಲೇ ಉತ್ಪಾದನೆ ಹೋದವರ್ಷದ್ದು ಹೆಚ್ಚು ಕೊಟ್ಟಿದ್ದಾರೆ ಈ ವರ್ಷದ್ದು ಏನು ಎಂದು ತಿಳಿಯುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಹೇಳಿರುವುದು ಎಕ್ಸ್‌ಟ್ರಾ ಶುಗರ್ ಪ್ರೊಡ್ಯೂಸ್ಡ್ ಆದಕ್ಕೆ ಟೋಟಲ್ ಪ್ರೊಡಕ್ಷನ್ ಕೊಟ್ಟಿದ್ದೇವೆ.

Improper treatment of Harijan Officials in Public Works Department

120. SRI R.S. NADONI (Raibag).—Will the Chief Minister be pleased to state:—

(a) whether it has come to their notice that the Engineers in Public Works and Irrigation Departments behave rudely with their subordinate Harijan staff;

(b) if so, action taken by them to prevent the same?

SRI M. VEERAPPA MOILY (Minister for Finance and Planning) on behalf of SRI R. GUNDU RAO (Chief Minister).—

(a) No.

(b) This question does not arise.

ಶ್ರೀ ಆರ್.ಎಸ್. ನಡೋಣಿ.—ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ಹರಿಜನ ಗಿರಿಜನರನ್ನು ಕಾವುಗಾರಿ ಕೆಲಸಕ್ಕೆಂದು ತೆಗೆದುಕೊಂಡಿದ್ದು ಸರಿಯಷ್ಟೆ. ಇತ್ತೀಚೆಗೆ ಶ್ರೀ ಚಿಕ್ಕೋಡಿ ಎಂಬ ಹೆಸರಿರುವ ಎಕ್ಸಿಕ್ಯೂಟೀವ್ ಎಂಜನೀಯರ್ ಬಂದಿದ್ದಾರೆ. ಅವರನ್ನು ಬಂದ ಮೇಲೆ ಜಾತಿಯ ಕೀಳು ಭಾವನೆಯಿಂದ ಈ ಹರಿಜನರನ್ನು ಕೆಲಸದಿಂದ ಏಕಾಏಕಿ ತೆಗೆದುಹಾಕಿದ್ದಾರೆ ಮತ್ತೆ ಹರಿಜನರನ್ನು ಕಂಡರೆ ಬಹಳ ಕೀಳು ಭಾವನೆಯಿಂದ ನೋಡುತ್ತಿದ್ದಾರೆ. ಅದಕ್ಕೆ ಸರ್ಕಾರ ಇವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೆ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಬಹಳ ಸಾರ್ವಜನಿಕವಾಗಿದೆ. ಆದ್ದರಿಂದ ಅವರು ಸ್ಪೆಸಿಫಿಕ್ ಆಗಿ ಸರ್ಕಾರದ ಗಮನಕ್ಕೆ ತಂದರೆ ಅದನ್ನು ಪರಿಶೀಲನೆ ಮಾಡಿ ಆ ರೀತಿ ಆಗದ ರೀತಿ ನೋಡಿಕೊಳ್ಳುತ್ತೇವೆ.

ಶ್ರೀ ಆರ್.ಎಸ್. ನಡೋಣಿ.—ಮೊದಲು ಬೇರೆ ಇಂಜನೀಯರ್ ಇದ್ದಾಗ ತೆಗೆದುಕೊಂಡ ಈ ಹರಿಜನರನ್ನು ಮಾನ್ಯ ಚಿಕ್ಕೋಡಿಯವರು ಬಂದಮೇಲೆ ತೆಗೆದುಹಾಕಿದ್ದಾರೆ. ಇನ್ನು ಬೇರೆ ಯಾವ ತಾಲ್ಲೂಕಿನಲ್ಲಿ ಎಲ್ಲಿಯೂ ತೆಗೆದುಹಾಕಿಲ್ಲ. ಆದ್ದರಿಂದ ಇವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ವೀರಪ್ಪ ಮೊಯಿಲಿ.—ಈಗ ಮಾನ್ಯ ಸದಸ್ಯರು ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟವರಿಂದ ವರದಿಯನ್ನು ತರಿಸಿ ಆದರಲ್ಲಿ ಏನಾದರೂ ತೊಂದರೆ ಯಾಗಿದೆಯೇ ಅನ್ಯಾಯವಾಗಿದೆಯೇ ಎಂಬುದನ್ನು ನೋಡಿ ಅಲ್ಲಿ ಯಾವುದೇ ಭೇದಭಾವನೆಗಳು ಆಗದ ಹಾಗೆ ಸರ್ಕಾರ ಖಂಡಿತವಾಗಿಯೂ ನೋಡಿಕೊಳ್ಳುತ್ತದೆ.

Slums at 'Kasturba Nagar' in Bangalore City

447. SMT. S. PRAMILA (Chamrajpet)—Will the Minister for Housing & Urban Development be pleased to state:—

(a) whether it is a fact that over right slums are coming up at Kasturba Nagar, Bangalore City.

(b) if so, the action taken to prevent such occurrences.

SRI DHARAM SINGH (Minister for Housing and Urban Development),—

(a) Yes,

(b) Action is being taken departmentally with the help of Police to remove the unauthorised huts. Necessary instructions to the officers concerned to prevent such occurrences have also been issued.

ಶ್ರೀಮತಿ ಎಸ್. ಪ್ರಮೀಳ.—ಸ್ವಾಮಿ ಬೆಂಗಳೂರು ನಗರದ ಕಸ್ತೂರಿಬಾ ನಗರದಲ್ಲಿ ಎಷ್ಟು ಗುಡಿಸಲುಗಳು ಬಂದಿವೆ, ಮತ್ತು ಆ ಗುಡಿಸಲುಗಳು ಯಾವಾಗ ಬಂದವು. ಇದರಲ್ಲಿ ಈಗ ಎಷ್ಟು ಗುಡಿಸಲುಗಳನ್ನು ತೆಗೆದುಹಾಕಿದ್ದೀರಿ? ಅವುಗಳನ್ನು ತೆಗೆಯುವುದಕ್ಕೆ ಯಾರಿಗೆ ಯಾವಾಗ ಆದೇಶವನ್ನು ಕೊಟ್ಟಿದ್ದೀರಿ?

ಶ್ರೀ ಧರ್ಮಸಿಂಗ್.—ಇಲ್ಲಿ ಈ ಕಸ್ತೂರಿಬಾ ಸ್ಲಂನಲ್ಲಿ ಒಂದು ಸಾವಿರ ಗುಡಿಸಲುಗಳು ಬಂದಿದ್ದವು. ಅವು ೧೯೮೦ನೇ ಫೆಬ್ರುವರಿ ತಿಂಗಳಿನಲ್ಲಿ ಬಂದಿದ್ದವು. ಇದರ ಬಗ್ಗೆ ನಮ್ಮ ಬೆಂಗಳೂರು ಕಾರ್ಪೋರೇಷನ್ ಕಮಿಷನರಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೂ ಆದೇಶವನ್ನು ಕೊಟ್ಟಿದ್ದೇವೆ. ಆ ಜಾಗವನ್ನು ರಿಟೈರ್ಡ್ ಕಾನ್‌ಸ್ಟೇಬಲ್‌ಗಳಿಗೆ ಮತ್ತು ಸರ್ವೀಸ್‌ನಲ್ಲಿರತಕ್ಕ ಕಾನ್‌ಸ್ಟೇಬಲ್‌ಗಳಿಗೆ ಕೊಡಬೇಕು ಎಂದು ಆ ಜಾಗವನ್ನು ಮೊಸಲಾಗಿ ಇಟ್ಟಿದ್ದೇವೆ. ಅದು ರೆವಿನ್ಯೂ ಲ್ಯಾಂಡ್ ಈಗ ಅದನ್ನು ಕಾರ್ಪೋರೇಷನ್ನಿಗೆ ತೆಗೆದುಕೊಂಡಿದ್ದಾರೆ. ಅಲ್ಲಿದ್ದ ಗುಡಿಸಲುಗಳನ್ನೆಲ್ಲ ತೆಗೆದುಹಾಕಿದೆ. ಈಗ ಅಲ್ಲಿ ೧೫೫–೨೦ ಜೋಪಡಿಗಳು ಮಾತ್ರ ಉಳಿದಿವೆ. ಇದರ ಬಗ್ಗೆಯೂ ಕೂಡ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

ಶ್ರೀಮತಿ ಎಸ್. ಪ್ರಮೀಳಾ.—ಅಲ್ಲಿ ಕಾಂಗ್ರೆಸ್ ಹುಲ್ಲು ಬೆಳೆದಿದೆ. ಇದು ಕಾರ್ಪೋರೇಷನ್ ಅಧಿಕಾರಿಗಳಿಗೂ ಗೊತ್ತು ಪೋಲಿಸಿನವರಿಗೂ ಗೊತ್ತು, ಅಲ್ಲಿ ಒಂದು ಸಾವಿರ ಗುಡಿಸಲುಗಳು ಇವೆ. ಕಾರ್ಪೋರೇಷನ್ ಅಧಿಕಾರಿಗಳು ಮತ್ತು ಪೋಲೀಸಿನವರು ಆ ನಿವೇಶನಕ್ಕೆ ಬಂದು ಆ ಗುಡಿಸಲುಗಳನ್ನು ತೆಗೆದಂಹಾಕಬೇಕೆಂದು ಹೇಳಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಪೋಲಿಸಿನವರು ಆ ಜಾಗಕ್ಕೆ ಹೋಗಿಲ್ಲ. ಅಲ್ಲಿದ್ದ ಗುಡಿಸಲುಗಳನ್ನು ತೆಗೆದುಹಾಕಿಲ್ಲ. ಈ ಸ್ಲಂ ಬಗ್ಗೆ ಲೆಜಿಸ್ಲೇಟರ್ಸ್ ಕಮಿಟಿಯನ್ನು ಮಾಡಿದ್ದಾಗ ಶ್ರೀಮಾನ್ ವಿ.ಎಸ್. ಕೃಷ್ಣಯ್ಯನವರು ಹೋದ ತಿಂಗಳು ಆ ಜಾಗಕ್ಕೆ ಹೋಗಿ ಗುಡಿಸಲುಗಳು ಇದ್ದದ್ದನ್ನು ಫೋಟೋ ತೆಗೆದುಕೊಂಡು ಬಂದಿದ್ದಾರೆ ಅಲ್ಲಿ ಗುಡಿಸಲುಗಳನ್ನು ತೆಗೆದುಹಾಕುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತೀರಾ?

ಶ್ರೀ ಧರ್ಮಸಿಂಗ್.—ಇದರ ಬಗ್ಗೆ ಶ್ರೀಮತಿ ಪ್ರಮೀಳಾ ಅವರ ಜೊತೆಯಲ್ಲಿ ಮಾತನಾಡಬೇಕೆಂದು ಅವರಿಗೆ ಫೋನ್ ಮಾಡಿದ್ದೆ ಅವರು ಫೋನ್‌ನಲ್ಲಿ ಸಿಕ್ಕಲಿಲ್ಲ. ನಾನು ಇವೊತ್ತು ಆ ಜಾಗಕ್ಕೆ ಹೋಗಿ ಬಂದಿದ್ದೇನೆ. ಅಲ್ಲಿ ಒಂದು ಕಡೆ ಕೇವಲ ೭ ಗುಡಿಸಲುಗಳು ಮಾತ್ರ ಇವೆ. ಮತ್ತೊಂದು ಕಡೆ ೫–೬ ಗುಡಿಸಲುಗಳು ಮಾತ್ರ ಇವೆ. ಇದರ ಬಗ್ಗೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಪೋಲೀಸ್ ಅಧಿಕಾರಿಗಳೂ ಕೂಡ ಅಲ್ಲಿಗೆ ಹೋಗಿ ಬಂದಿದ್ದಾರೆ ಈಗ ನಾನು ಹೇಳಿದ ೧೦–೧೨ ಗುಡಿಸಲುಗಳನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಎಲ್ಲರೂ ಹೊರಗಡೆ ಹೋಗಿದ್ದಾರೆ.

ಶ್ರೀಮತಿ ಎಸ್. ಪ್ರಮೀಳಾ.— ಅಲ್ಲಿರತಕ್ಕ ಎಲ್ಲಾ ಗುಡಿಸಲುಗಳನ್ನು ತೆಗೆಸಿ ಹಾಕುವುದಕ್ಕೆ ಎಷ್ಟು ದಿವಸಗಳಲ್ಲಿ ವ್ಯವಸ್ಥೆ ಮಾಡುತ್ತೀರಿ, ಅಲ್ಲಿ ಗುಡಿಸಲುಗಳನ್ನು ಹಾಕಿಸುವುದಕ್ಕೆ ಯಾರು ಪ್ರಯತ್ನ ಮಾಡಿದ್ದಾರೆ ಅವರ ಮೇಲೆ ಪ್ರಾಸಿಕ್ಯೂಷನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—ಬೆಂಗಳೂರಿನಲ್ಲಿ ಎಲ್ಲೆಲ್ಲಿ ಖಾಲಿ ಜಾಗ ಇರುತ್ತದೆ ಅಲ್ಲೆಲ್ಲಾ ಜನಗಳು ಹೋಗಿ ಗುಡಿಸಲುಗಳನ್ನು ಹಾಕುತ್ತಿದ್ದಾರೆ. ಎಲ್ಲ ಕಡೆಯೂ ಆ ರೀತಿ ಇದೆ. ಆದ್ದರಿಂದ ಇದರ ಬಗ್ಗೆ ಯಾರ ಮೇಲೂ ಕ್ರಮ ತೆಗೆದುಕೊಳ್ಳತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ಈಗ ನಾನು ಆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಈಗ ಯಾರೂ ಇಲ್ಲ. ಈಗ ಮಾನ್ಯ ಸದಸ್ಯರು ಆ ಜಾಗಕ್ಕೆ ಹೋಗಿ ನೋಡಿದರೆ ಪರಿಸ್ಥಿತಿ ಗೊತ್ತಾಗುತ್ತದೆ.

ಶ್ರೀಮತಿ ಎಸ್. ಪ್ರಮೀಳಾ.—ಅಲ್ಲಿ ಎಲ್ಲಿಯವರೆಗೆ ಗುಡಿಸಲುಗಳು ಇರುತ್ತವೆಯೋ ಅಲ್ಲಿಯ ವರೆಗೂ ಜನಗಳು ವಾಸ ಮಾಡುತ್ತಾರೆ ಆದ್ದರಿಂದ ಈಗ ಅಲ್ಲಿರತಕ್ಕ ಗುಡಿಸಲುಗಳನ್ನು ಎಷ್ಟು ದಿವಸ ಗಳಲ್ಲಿ ತೆಗೆಸಿ ಹಾಕುತ್ತೀರಾ?

ಶ್ರೀ ಧರ್ಮಸಿಂಗ್.—ಅಲ್ಲಿದ್ದ ಒಂದು ಸಾವಿರ ಗುಡಿಸಲುಗಳಲ್ಲಿ ಕೇವಲ ೨೦-೨೫ ಗುಡಿಸಲುಗಳು ಮಾತ್ರ ಉಳಿದಿವೆ. ನಾನು ಈ ದಿವಸ ೯-೬೫ರಲ್ಲಿ ಆ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಆದ್ದರಿಂದ ನಾನು ಈ ಸದನದಲ್ಲಿ ಹೇಳುವಾಗ ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಅಲ್ಲಿದ್ದಂತಹ ಎಲ್ಲಾ ಗುಡಿಸಲು ಗಳನ್ನೂ ತೆಗೆದುಹಾಕಿದ್ದಾರೆ. ಇನ್ನಿರತಕ್ಕ ೧೦-೨೦ ಗುಡಿಸಲುಗಳನ್ನೂ ತೆಗೆದುಹಾಕಬೇಕೆಂದೂ ಆದೇಶ ವನ್ನು ಕೊಡಲಾಗಿದೆ. ಇನ್ನು ಒಂದೆರಡು ದಿವಸಗಳಲ್ಲಿ ಇರತಕ್ಕ ಗುಡಿಸಲುಗಳನ್ನೂ ತೆಗೆದುಹಾಕುತ್ತಾರೆ

ಅಧ್ಯಕ್ಷರು. —ಈ ೩೨೭ (೪೭೨) ಪ್ರಶ್ನೆಯನ್ನು ಪೆಲ್ಡ್‌ಓವರ್ ಮಾಡಲಾಗಿದೆ.

Grant of HRA & CCA to teachers residing in Belgaum Corporation limits.

591. SRI G.L. ASHTEKAR (Bagewadi).—Will the Minister for Finance and Planning be pleased to state:—

(a) whether the Government Order No. FD 145 SRP(1) 71, dated 12th January, 1973 containing the list of cities and towns was revised on the basis of the 1971 census for purpose of grant of HRA & CCA to Government employees with effect from 1st January, 1973;

(b) if so, whether it is applicable in Belgaum area;

(c) whether HRA & CCA have been admitted and paid to the teachers serving in places situated within a distance of 8 Km. from Belgaum Corporation area. The names of all such villages be given;

(d) the number of villages around the Belgaum Corporation area which are situated within 8 Km. and their names;

(e) whether Government intend to grant HRA & CCA to all the teachers serving at all places situated within a distance of 8 Km. from Belgaum Corporation area?

SRI M. VEERAPPA MOILY (Minister for Finance and Planning).—

(a) Yes.

(b) Yes.

(c) According to the existing orders, HRA & CCA at the rates applicable to the employees working in Belgaum City, is admissible to the employees who are posted to any place which forms part of Belgaum urban agglomeration.

(d) A list is appended.

(e) No.